ರಿಪೇರಿ ಮಾಡುವುದು ಜಿಲ್ಲಾ ಪಂಚಾಯತಿಯ ಕರ್ತವ್ಯ. ಅದನ್ನು ಅವರು ಮಾಡಬೇಕು.

ಶ್ರೀ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು: ಆರೋಗ್ಯ ಇಲಾಖೆಯ ಬಗ್ಗೆ ನಾಡಗೌಡ ಸಮಿತಿಯ ವರದಿಯನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳುವುದಿಲ್ಲವೆ? ರಾಜ್ಯದಲ್ಲಿ ಹಲವಾರು ಆಸ್ಪತ್ರೆಗಳಲ್ಲಿ ಸಂದರ್ಶನ ಸಮಿತಿಗಳನ್ನು ಮಾಡಲಿಲ್ಲ ಇದಕ್ಕೆ ಕಾರಣವೇನು? ಅಧಿಕಾರಿಗಳೇನಾದರೂ ಅಡ್ಡಿ ಮಾಡಿದ್ದಾರೋ, ತಾವೇ ಬುದ್ಧಿವಂತಿಕೆಯಿಂದ ಏನಾದರೂ ಅಡ್ಡಿ ಮಾಡಿದ್ದೀರೋ?

ಡಾ: ಎ.ಬಿ. ಮಾಲಕರೆಡ್ಡಿ: ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಂದರ್ಶನ ಸಮಿತಿಗಳನ್ನು ಮಾಡುವುದಿದ್ದರೆ ಜಿಲ್ಲಾ ಪಂಚಾಯಿತಿಯವರು ಮಾಡಬೇಕು, ನಾವು ಮಾಡುವುದಿಲ್ಲ.

ಅಧ್ಯಕ್ಷರು: ಸಂದರ್ಶನ ಸಮಿತಿಗಳನ್ನು ಮಾಡಿ ಎಂದು ಎಲ್ಲಾ ಶಾಸಕರುಗಳಿಗೂ ನಿರ್ದೇಶನ ಬಂದಿದೆಯಲ್ಲ ನನಗೂ ಅದು ಬಂದಿದೆ.

ಶ್ರೀ ಕಟ್ಟಾಸುಬ್ರಹ್ಮಣ್ಯಂ ನಾಯ್ಡು: ಮಾನ್ಯ ಮಾಲಕರೆಡ್ಡಿಯವರೇ, ಇದರ ಬಗ್ಗೆ ತಾವೇ ಕಾಗದವನ್ನು ಬರೆದಿದ್ದೀರಿ. ಗೌಸಿಯಾ ಆಸ್ಪತ್ರೆಯಲ್ಲಿ ಸಂದರ್ಶನ ಸಮಿತಿಯನ್ನು ಆದಷ್ಟು ಬೇಗ ಮಾಡುವುದಾಗಿ ಹೇಳಿದ್ದೀರಿ. ಅದನ್ನು ಇದುವರೆಗೆ ಏಕೆ ಮಾಡಲಿಲ್ಲವೆಂದು ಕೇಳುತ್ತಿದ್ದೇನೆ. ಗೌಸಿಯಾ ಆಸ್ಪತ್ರೆ ಅವರ ಅಂಡರ್‌ನಲ್ಲೇ ಬರುತ್ತದೆ, ಸಂದರ್ಶನ ಸಮಿತಿಯನ್ನು ಅಲ್ಲಿ ಮಾಡಲು ಇವರಿಗೇನು ತೊಂದರೆ? ನಾಡಗೌಡ ಸದನದ ಸಮಿತಿಯ ವರದಿಯೇನಾಗಿದೆ? ತಾವು ತಮಿಳುನಾಡಿನ ಮಾದರಿಯಲ್ಲಿ ಏನಾದರೂ ಮಾಡುತ್ತೀರೋ ಇಲ್ಲದಿದ್ದರೆ ಇಲ್ಲಿ ಅವ್ಯವಹಾರ ನಡೆಯಲು ಬಿಡುತ್ತೀರೋ?

ಡಾ: ಎ.ಬಿ. ಮಾಲಕರೆಡ್ಡಿ: ಸಂದರ್ಶನ ಸಮಿತಿಯ ಬಗ್ಗೆ ನನಗೆ ಅನ್ವಯವಾಗುವುದಿಲ್ಲ. ನಾಡಗೌಡ ಸಮಿತಿಯ ವರದಿ ವಿಷಯ ಸಮಿತಿಯ ವರದಿಯಾಗಿದೆ.

ಮಂಡ್ಯ ಕ್ಷೇತ್ರದ ತಗ್ಗಹಳ್ಳಿ ಪದವಿ ಪೂರ್ವ ಕಾಲೇಜಿನ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸುವುದು.

೧೫೨ (೧೭೯೯)

ಶ್ರೀ ಎಂ.ಎಸ್.ಆತ್ಮಾನಂದ(ಮಂಡ್ಯ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಮಂಡ್ಯ ವಿಧಾನಸಭಾ ಕ್ಷೇತ್ರದ ತಗ್ಗಹಳ್ಳಿ ಪದವಿ ಪೂರ್ವ ಕಾಲೇಜಿಗೆ ಕಟ್ಟಡ ನಿರ್ಮಾಣ ಮಾಡಲು ಸರ್ಕಾರದ ಅನುಮೋದನೆ ನೀಡಲಾಗಿದೆಯೆ?

೨) ಹಾಗಿದ್ದಲ್ಲಿ ಈ ಕಟ್ಟಡದ ನಿರ್ಮಾಣದ ವಿವರಗಳೇನು

೩) ಈ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಯಾವಾಗ ಸಂಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ವಿಶ್ವನಾಥ್: (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

೧) ತಗ್ಗಹಳ್ಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಟ್ಟಡ ನಿರ್ಮಾಣದ ಕಾಮಗಾರಿಗಾಗಿ ೧೯೯೮-೯೯ನೇ ಸಾಲಿನಲ್ಲಿ ರೂ.೧.೩೫ ಲಕ್ಷಗಳ ಆಯವ್ಯಯ ಅನುದಾನವನ್ನು ನಿಗದಿಗೊಳಿಸಿ ಅನುಮೋದನೆ ನೀಡಲಾಗಿದೆ. ೨೦೦೦-೦೧ನೇ ಸಾಲಿಗೆ ರೂ.೬೯,೦೦೦-೦೦ ನಿಗದಿಗೊಳಿಸಿದೆ.

೨) ಒಂದು ಪ್ರಾಂಶುಪಾಲರ ಕೊಠಡಿ ಒಂದು ಸಿಬ್ಬಂದಿಯ ಕೊಠಡಿ ಎರಡು ತರಗತಿ ಕೊಠಡಿಗಳು ಒಟ್ಟು ನಾಲ್ಕು ಕೊಠಡಿಗಳು. ಈ ಕಟ್ಟಡದ ಕಾಮಗಾರಿ ಲಿಂಟಲ್‌ವರೆಗೆ ಆಗಿರುತ್ತದೆ.

೩) ಸದರಿ ಕಾಮಗಾರಿಯನ್ನು ಆದ್ಯತೆಯ ಮೇಲೆ ಸಂಪೂರ್ಣಗೊಳಿಸಲು ಕ್ರಮ ಜರುಗಿಸಲಾಗುವುದು.

ಶ್ರೀ ಎಂ.ಎಸ್.ಆತ್ಮಾನಂದ: ಮಾನ್ಯ ಅಧ್ಯಕ್ಷರೆ, ತಗ್ಗಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ೧೯೯೪ರಲ್ಲಿ ಶಂಕುಸ್ಥಾಪನೆ ಮಾಡಿದರೂ ೧೯೯೮-೯೯ನೇ ಸಾಲಿನಲ್ಲಿ ೧.೩೫ ಲಕ್ಷ ರೂಪಾಯಿ ಅನುದಾನವನ್ನು ನೀಡಲಾಗಿದೆ ಮತ್ತು ೨೦೦೦-೨೦೦೧ನೇ ಸಾಲಿಗೆ ೬೯ ಸಾವಿರ ರೂಪಾಯಿಗಳನ್ನು ನಿಗದಿಗೊಳಿಸಲಾಗಿದೆಯೆಂದು ಉತ್ತರದಲ್ಲಿ ಹೇಳಿದ್ದಾರೆ. ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಿದ್ದು ಸದರಿ ಕಾಮಗಾರಿಯನ್ನು ಆದ್ಯತೆಯ ಮೇಲೆ ಸಂಪೂರ್ಣಗೊಳಿಸಲಾಗುವುದೆಂದು ತಿಳಿಸಿರುತ್ತಾರೆ. ರಾಜ್ಯದಲ್ಲಿರುವ ಸರ್ಕಾರಿ ಪದವಿಪೂರ್ವ ಕಟ್ಟಡಗಳಿಗೆ ವಿಶೇಷವಾದ ಅನುದಾನವನ್ನು ಸರ್ಕಾರವೇನಾದರೂ ಇಟ್ಟಿದೆಯೋ? ಆಥವಾ ಮುಂದಿನ ಆಯವ್ಯಯದಲ್ಲಿ ಈ ಪದವಿಪೂರ್ವ ಕಾಲೇಜಿಗೆ ಹೆಚ್ಚಿನ ಅನುದಾನವನ್ನು ನೀಡುತ್ತದೆಯೇ ಮತ್ತು ಈ ಒಂದು ಪದವಿಪೂರ್ವ ಕಾಲೇಜಿನ ಕಟ್ಟಡವನ್ನು ಯಾವಾಗ ಪೂರ್ಣಗೊಳಿಸಲಾಗುವುದು ಎಂಬ ಬಗ್ಗೆ ಖಚಿತವಾದ ಮಾಹಿತಿ ಬಯಸುತ್ತೇನೆ.

ಶ್ರೀ ಹೆಚ್.ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಇದು ಮೊದಲು ೮ ಲಕ್ಷಕ್ಕೆ ಅನುಮೋದನೆಯಾಗಿ ಈಗ ಎಸ್ಕಲೇಷನ್ ಆಗಿ ೧೫ ಲಕ್ಷ ರೂಪಾಯಿಗಳಾಗಿದೆ. ಈ ವರ್ಷದಲ್ಲಿ ಇದಕ್ಕೆ ಉಳಿಕೆ ಹಣ ಎಷ್ಟು ಬೇಕಾಗುತ್ತದೆ. ಅಷ್ಟನ್ನು ಮಂಜೂರಾತಿ ಮಾಡಿ ಅದನ್ನು ಪೂರ್ಣ ಮಾಡಲು ಎಲ್ಲಾ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಎಸ್.ಆತ್ಮಾನಂದ್: ಕಳೆದ ಏಳು ವರ್ಷಗಳಿಂದಲೂ ಈ ಕೆಲಸ ಕುಂಟಿಕೊಂಡು ಬರುತ್ತಿದೆ. ಇನ್ನೂ ೧೨ ಲಕ್ಷ ರೂಪಾಯಿಗಳು ಬೇಕೆಂದು ಹೇಳುತ್ತಾರೆ. ಈ ೧೨ ಲಕ್ಷ ರೂಪಾಯಿಗಳನ್ನು ಬರುವ ಆಯವ್ಯಯದಲ್ಲಿ ಒದಗಿಸುತ್ತಾರೆಯೆ? ವಿದ್ಯಾರ್ಥಿಗಳು, ಪೋಷಕರು ಆ ಗ್ರಾಮಸ್ಥರು ಸಹ ಇದರ ಬಗ್ಗೆ ಬಹಳ ಒತ್ತಡವನ್ನು ತರುತ್ತಿದ್ದಾರೆ. ಆದ್ದರಿಂದ ೨೦೦೧-೨೦೦೨ನೇ ಸಾಲಿನಲ್ಲಿ ಈ ಕಟ್ಟಡವನ್ನು ಸಂಪೂರ್ಣ ಮಾಡಲು ಅನುದಾನವನ್ನು ನೀಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಹೆಚ್.ವಿಶ್ವನಾಥ್: ಈ ಸಾರಿ ಹಣವನ್ನು ಒದಗಿಸುತ್ತಿದ್ದೇವೆ, ಉಳಿತಾಯದ ಹಣ ನಮ್ಮ ಹತ್ತಿರ ಇದೆ. ಅದನ್ನು ಕ್ರೋಢೀಕರಿಸಿದ್ದೇವೆ, ಈ ಸಲವೇ ಆ ಕಟ್ಟಡವನ್ನು ಪೂರ್ಣ ಮಾಡಲು ಎಲ್ಲಾ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶಿವಮೊಗ್ಗ ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳ ಹುದ್ದೆ

೧೫೩(೧೬೫೯)

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ಹುದ್ದೆ ಸಂಖ್ಯೆ ಎಷ್ಟು?

ಆ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ.ವೈ.ಘೋರ್ಪಡೆ: (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ೧ (ಒಂದು)